# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1405

2) ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ)

3) ಉತ್ತರಿಸುವ ದಿನಾಂಕ : 18/12/2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು 12 ಕೆ.ಎಸ್.ಆರ್.ಪಿ. ಪಡೆಗಳಿದ್ದು ಕಲ್ಯಾಣ ಕರ್ನಾಟಕದ 07 ಜಿಲ್ಲೆಗಳು ಸೇರಿ ಕೇವಲ ಒಂದೇ ಒಂದು ಕೆ.ಎಸ್.ಆರ್.ಪಿ. ಪಡೆ ಕಲಬುರಗಿಯಲ್ಲಿದ್ದು, ಈ ಪಡೆಯಲ್ಲಿರುವ 07 ಕಂಪನಿಗಳಲ್ಲಿ 03 ಕಂಪನಿಗಳನ್ನು ಬೀದರ್ ಡಿಟ್ಯಾಚ್‌ಮೆಂಟ್‌ಗೆ ಮತ್ತು ಮಹಿಳಾ ಕಂಪನಿಗೆ ನೀಡಿದ್ದು, ಕೇವಲ 04 ಕಂಪನಿಗಳು ಮಾತ್ರ ಕಲಬುರಗಿ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಮತ್ತೊಂದು ಕೆ.ಎಸ್.ಆರ್.ಪಿ. ಪಡೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಲ್ಯಾಣ ಕರ್ನಾಟಕ ಭಾಗದಲ್ಲಿ 06ನೇ ಪಡೆ ಕೆ.ಎಸ್. ಆರ್.ಪಿ ಕಲಬುರಗಿ ಮತ್ತು ಐ.ಆರ್.ಬಿ, ಮುನಿರಾಬಾದ್ ಪಡೆಗಳು ಕಾರ್ಯನಿರ್ವಹಿಸುತ್ತಿದ್ದು, 06ನೇ ಪಡೆ ಕೆ.ಎಸ್. ಆರ್.ಪಿ ಕಲಬುರಗಿ ಘಟಕದಲ್ಲಿರುವ 07 ಕಂಪನಿಗಳಲ್ಲಿ 01 ಕಂಪನಿಯನ್ನು ಕಲ್ಯಾಣ ಕರ್ನಾಟಕದ ಭಾಗವೇ ಆದ ಬೀದರ್ ಜಿಲ್ಲೆಯ ನೌಬಾದ್‌ನಲ್ಲಿ ನಿಯೋಜಿಸಲಾಗುತ್ತಿದೆ. ಪ್ರಸ್ತಾಪಿತ ಮಹಿಳಾ ಕಂಪನಿಯು 06ನೇ ಪಡೆ ಕೆ.ಎಸ್.ಆರ್.ಪಿ. ಕಲಬುರಗಿ ಘಟಕದ ಭಾಗವೇ ಆಗಿರುತ್ತದೆ.<br><br>ಕಲ್ಯಾಣ ಕರ್ನಾಟಕ ಭಾಗದಲ್ಲಿ ಮತ್ತೊಂದು ಕೆ.ಎಸ್.ಆರ್.ಪಿ. ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ. |
| ಆ) | ಮೈಸೂರಿನಲ್ಲಿ ಹೊಸ ಕೆ.ಎಸ್.ಆರ್.ಪಿ. ಪಡೆಯನ್ನು ನಿರ್ಮಿಸಿದ್ದು, ಇದಕ್ಕಿಂತ ಮುಂಚೆ ಅಂದರೆ 5-6 ವರ್ಷಗಳ ಹಿಂದಿನಿಂದಲೂ ಕಲ್ಯಾಣ ಕರ್ನಾಟಕ ಭಾಗದ ಸುಮಾರು 25ಕ್ಕೂ ಹೆಚ್ಚು ಸಚಿವರು ಹಾಗೂ ಶಾಸಕರು ರಾಯಚೂರಿನಲ್ಲಿ ಕೆ.ಎಸ್.ಆರ್.ಪಿ. ಪಡೆಯನ್ನು ನಿರ್ಮಿಸಲು ಮನವಿ ಪತ್ರ ಸಲ್ಲಿಸಿದ್ದರೂ ಕೂಡ ಎರಡನೇ ಬಾರಿ ತಿರಸ್ಕರಿಸಲು ಕಾರಣವೇನು; ಈ ಬೆಳವಣಿಗೆ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ಸರ್ಕಾರ ಮಲತಾಯಿ ಧೋರಣೆ ತೋರಿದಂತಲ್ಲವೆ; | ಮೈಸೂರು ಜಿಲ್ಲೆಯಲ್ಲಿ 05ನೇ ಪಡೆ ಕೆ.ಎಸ್.ಆರ್.ಪಿ ಘಟಕವು ಕಾರ್ಯನಿರ್ವಹಿಸುತ್ತಿದ್ದು, ಮೈಸೂರಿನಲ್ಲಿ ನೂತನವಾಗಿ ಕೆ.ಎಸ್.ಆರ್.ಪಿ. ಪಡೆಯನ್ನು ಸೃಜಿಸಿರುವುದಿಲ್ಲ.<br><br>2025-26ನೇ ಸಾಲಿನಲ್ಲಿ ರಾಜ್ಯ ಕೆ.ಎಸ್.ಆರ್.ಪಿ. ಘಟಕದಲ್ಲಿ 02 ಭಾರತೀಯ ಮೀಸಲು ಪಡೆಗಳನ್ನು ಒಟ್ಟಾರೆ 2014 ಹುದ್ದೆಗಳೊಂದಿಗೆ ಹೊಸದಾಗಿ ಸೃಜಿಸಲು ಸಹಮತಿ ನೀಡಲಾಗಿದ್ದು, ಈ 02 ಭಾರತೀಯ ಮೀಸಲು ಪೊಲೀಸ್ ಪಡೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಗೊಳ್ಳ ಬೇಕಾಗಿರುವುದರಿಂದ, ಪ್ರಸಕ್ತ ಸಾಲಿಗೆ ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆ.ಎಸ್. ಆರ್.ಪಿ. ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. |

| | | |
|---|---|---|
| ಇ) | ರಾಯಚೂರಿನಲ್ಲಿ ಕೆ.ಎಸ್.ಆರ್.ಪಿ. ಪಡೆಯನ್ನು ಸ್ಥಾಪಿಸಲಾಗುವುದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವುದು? | 2025-26ನೇ ಸಾಲಿನಲ್ಲಿ ರಾಜ್ಯ ಕೆ.ಎಸ್.ಆರ್.ಪಿ. ಘಟಕದಲ್ಲಿ 02 ಭಾರತೀಯ ಮೀಸಲು ಪಡೆಗಳನ್ನು ಒಟ್ಟಾರೆ 2014 ಹುದ್ದೆಗಳೊಂದಿಗೆ ಹೊಸದಾಗಿ ಸೃಜಿಸಲು ಸಹಮತಿ ನೀಡಲಾಗಿದ್ದು, ಈ 02 ಭಾರತೀಯ ಮೀಸಲು ಪೊಲೀಸ್ ಪಡೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಗೊಳ್ಳಬೇಕಾಗಿರುವುದರಿಂದ, ಪ್ರಸಕ್ತ ಸಾಲಿಗೆ ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆ.ಎಸ್. ಆರ್.ಪಿ. ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 240 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.